## ರಚಿತಾ ಏರಿಳಿತ...

ಪವನ್ ಒಡೆಯರ್ ನಿರ್ದೇಶನದ 'ನಟ ಸಾರ್ವಭೌಮ' ಚಿತ್ರ ಹಲವು ಕಾರಣಗಳಿಂದ ಗಮನಸೆಳೆದಿದೆ. ರಾಜ್‌ಕುಮಾರ್ ಅವರ ವಿಶೇಷಣಗಳಲ್ಲೊಂದನ್ನು ಚಿತ್ರದ ಶೀರ್ಷಿಕೆಯಾಗಿ ಇರಿಸಿರುವುದು ಹಾಗೂ ಆ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ನಟಿಸುತ್ತಿರುವುದು ಚಿತ್ರರಸಿಕರ ಕುತೂಹಲಕ್ಕೆ ಕಾರಣವಾಗಿದೆ. ಇದರ ಜೊತೆಗೆ, ನಾಯಕಿಯ ಕಾರಣದಿಂದಲೂ ಸಿನಿಮಾ ಸುದ್ದಿಯಲ್ಲಿದೆ.

ಈ ಮೊದಲು ಪವನ್ ಚಿತ್ರದಲ್ಲಿ ಪ್ರಿಯಾಂಕಾ ಜ್ವಾಲಾಕರ್ ನಾಯಕಿಯಾಗಿ ನಟಿಸಬೇಕಿತ್ತು. ಆದರೆ, ಡೇಟ್ಸ್ ಸಮಸ್ಯೆಯಿಂದಾಗಿ ಪ್ರಿಯಾಂಕಾ ಜಾಗಕ್ಕೆ ರಚಿತಾ ಬಂದರು. ಈ ಬದಲಾವಣೆಯನ್ನು ಕೆಲವರು ಸಾಮಾಜಿಕ ಜಾಲತಾಣದಲ್ಲಿ ಆಕ್ಷೇಪಿಸಿದ್ದು ವಿವಾದದ ಸ್ವರೂಪ ಪಡೆಯಿತು. 'ನಾನು ಏಕೆ ಬೇಡ' ಎಂದು ರಚಿತಾ ಪ್ರಶ್ನಿಸಿದ್ದು ಹಾಗೂ 'ಸುಮ್ಮನೆ ತಲೆಕೆಡಿಸಿಕೊಳ್ಳಬೇಡಿ' ಎಂದು ಪುನೀತ್ ಹೇಳಿದರೆನ್ನುವುದು ಸುದ್ದಿಯಾಯಿತು. ಒಟ್ಟಿನಲ್ಲಿ 'ಸಾರ್ವಭೌಮ'ನ ಜೊತೆಗೆ ರಾಣಿಯ ಕಾರಣದಿಂದಲೂ ಚಿತ್ರಕ್ಕೆ ಪ್ರಚಾರ ದೊರೆತಿದೆ.

ರಚಿತಾ ಅವರ ಈವರೆಗಿನ ಸಿನಿಮಾಜೀವನವನ್ನು ನೋಡಿದರೆ ಅದು ಏರಿಳಿತಗಳಿಂದ ಕೂಡಿದೆ. ಮೊದಲ ಚಿತ್ರದಲ್ಲೇ ದರ್ಶನ್‌ಗೆ ಜೋಡಿಯಾದ ಈ ಅಪ್ಪಟ ಕನ್ನಡದ ಹುಡುಗಿ, ನಂತರದಲ್ಲಿ ಪುನೀತ್, ಸುದೀಪ್‌ಗೆ ಜೋಡಿಯಾಗಿ ಕೂಡ ನಟಿಸಿದರು. ಆದರೆ, ಇದೇ ಬೇಡಿಕೆಯನ್ನು ನಿರಂತರವಾಗಿ ಉಳಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಿಲ್ಲ. ಇತ್ತೀಚೆಗಂತೂ ಅವರು ಪ್ರೇಕ್ಷಕರಿಗೆ ಹೆಚ್ಚು ಪರಿಚಿತವಾಗಿರುವುದು ಚಿತ್ರಗಳಿಗಿಂತಲೂ ಹೆಚ್ಚಾಗಿ ಕಿರುತೆರೆಯ ರಿಯಾಲಿಟಿ ಷೋ ಜ್ಯೂರಿಯಾಗಿರುವ ಮೂಲಕ.

ರಚಿತಾ ಉತ್ತಮ ಭರತನಾಟ್ಯ ಪಟು ಕೂಡ. ಭರತನಾಟ್ಯವನ್ನು ಶಾಸ್ತ್ರೀಯವಾಗಿ ಕಲಿತಿರುವ ಅವರು, ವೇದಿಕೆಗಳಲ್ಲಿ ನೃತ್ಯಪ್ರದರ್ಶನವನ್ನೂ ನೀಡಿದ್ದಾರೆ. ಕಿರುತೆರೆಯ ಧಾರಾವಾಹಿಯೊಂದರಲ್ಲೂ ನಟಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಕನ್ನಡತಿಯರ ಕೊರತೆಯಿರುವ ಸಂದರ್ಭದಲ್ಲಿ ಅವರನ್ನು ಉಳಿಸಿಕೊಳ್ಳುವ ಅಗತ್ಯ ಚಿತ್ರರಂಗಕ್ಕೂ ಇದೆ. ಈ ಹಿನ್ನೆಲೆಯಲ್ಲಿ 'ನಟಸಾರ್ವಭೌಮ' ಅವರ ವೃತ್ತಿಜೀವನಕ್ಕೆ ಹೊಸ ಹೊಳಪು ನೀಡಲಿದೆಯೇ ಎನ್ನುವುದು ಗಾಂಧಿನಗರದಲ್ಲಿನ ಕುತೂಹಲ.



## ಹಳೆಯ ಜಾನಿ, ಹೊಸ ಕಹಾನಿ

ಪ್ರೀತಂ ಗುಬ್ಬಿ ನಿರ್ದೇಶನದ 'ಜಾನಿ ಮೇರಾ ನಾಮ್' ತನ್ನ ನವಿರು ಪ್ರೇಮಕಥೆಯಿಂದ ಗೆಲುವು ಸಾಧಿಸಿದ್ದ ಚಿತ್ರ. ವಿಜಯ್ ಮತ್ತು ರಮ್ಯಾ ಜೋಡಿಯಾಗಿ ನಟಿಸಿದ್ದ ಈ ಚಿತ್ರದ ಯಶಸ್ಸಿನ ಸೂತ್ರವನ್ನು ಮತ್ತೂ ವಿಸ್ತರಿಸಿರುವ ನಿರ್ದೇಶಕರು 'ಜಾನಿ ಜಾನಿ ಎಸ್ ಪಪ್ಪಾ' ಎನ್ನುವ ಸಿನಿಮಾ ರೂಪಿಸಿದ್ದಾರೆ. ಚಿತ್ರದ ನಾಯಕಿ ಬದಲಾಗಿರುವುದನ್ನು ಬಿಟ್ಟರೆ ಚಿತ್ರತಂಡದಲ್ಲಿ ಹೆಚ್ಚಿನ ಬದಲಾವಣೆಗಳೇನೂ ಇಲ್ಲ. ಜಾನಿ ಈಗ ಪ್ರೇಕ್ಷಕರ ಎದುರಿಗೆ ಬರುವ ತವಕದಲ್ಲಿದ್ದಾನೆ (ಮಾರ್ಚ್ 30ರಂದು ತೆರೆಗೆ).

ಜಾನಿಯ ಪಾತ್ರದಲ್ಲಿ ದುನಿಯಾ ವಿಜಯ್ ನಟಿಸಿದ್ದಾರೆ. ಅವರ ಅಭಿನಯದ ನಿಕಟಪೂರ್ವ ಚಿತ್ರ 'ಕನಕ' ನಿರ್ಮಾಪಕರಿಗೆ ಕನಕವರ್ಷವನ್ನೇನೂ ಸುರಿಸಲಿಲ್ಲ. ಹಾಗಾಗಿ ವಿಜಯ್‌ರ ತಾರಾವರ್ಚಸ್ಸಿನ ಹೊಸ ಪರೀಕ್ಷೆಯಂತೆ 'ಜಾನಿ' ಕಾಣಿಸಿಕೊಳ್ಳುತ್ತಿದ್ದಾನೆ. ಹಿಂದಿನ ಚಿತ್ರದಲ್ಲಿ ವಿಜಯ್ ಜೊತೆಯಲ್ಲಿ ಚಿತ್ರವನ್ನು ಆವರಿಸಿಕೊಂಡಿದ್ದ ರಂಗಾಯಣ ರಘು ಹೊಸ ಆವೃತ್ತಿಯಲ್ಲೂ ಇದ್ದಾರೆ. ರಮ್ಯಾ ಬದಲಿಗೆ ರಚಿತಾ ರಾಮ್ ನಟಿಸಿದ್ದಾರೆ. ರಮ್ಯಾರಿಗೆ ಹೆಸರು ತಂದುಕೊಟ್ಟಿದ್ದ 'ಊರಿಗೊಬ್ಬ ಪದ್ಮಾವತಿ' ಗೀತೆಗೆ ರಚಿತಾ ಸೊಂಟ ಬಳುಕಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜನೆಯಲ್ಲಿ ಪುನೀತ್ ರಾಜ್‌ಕುಮಾರ್ ಗೀತೆಯೊಂದಕ್ಕೆ ಧ್ವನಿಯಾಗಿದ್ದಾರೆ.

ಜಾನಿಯ ಪ್ರಮುಖ ಆಕರ್ಷಣೆ ಇರುವುದು ಕಥೆ ಹಾಗೂ ಚಿತ್ರಕ್ಕಾಗಿ ರೂಪಿಸಿರುವ ಸೆಟ್‌ನಲ್ಲಿ. ಕಚೇರಿ, ಅಂಗಡಿಬೀದಿ, ಮಸೀದಿ–ಮಂದಿರ ಒಳಗೊಂಡಿರುವ ಓಣಿಯನ್ನು ಸೆಟ್ ಮೂಲಕವೇ ಸೃಷ್ಟಿಸಲಾಗಿದೆ. ಹಿಂದಿನ ಚಿತ್ರದಲ್ಲೂ ಸೆಟ್ ಪ್ರಮುಖ ಆಕರ್ಷಣೆಯಾಗಿತ್ತು. ಈ ಚಿತ್ರದಲ್ಲೂ ಸೆಟ್ ಸಿನಿಮಾಕ್ಕೊಂದು ವಿಶೇಷ ಪ್ರಭೆಯನ್ನು ಕಲ್ಪಿಸಲಿದೆ ಎನ್ನುವುದು ಚಿತ್ರತಂಡದ ವಿಶ್ವಾಸ.

ಚಿತ್ರಕಥೆ ಯುವಜನತೆಗೆ ಹತ್ತಿರವಾಗುವಂತಿದೆ ಎನ್ನುವ ನಂಬಿಕೆಯೇ ಚಿತ್ರದ ಗೆಲುವಿನ ಕುರಿತು ಪ್ರೀತಂ ಗುಬ್ಬಿ ಅವರಲ್ಲಿ ವಿಶ್ವಾಸ ಮೂಡಿಸಿದೆ. ರಂಜನೆಯ ಜೊತೆಗೆ ವಿಜಯ್ ವರ್ಚಸ್ಸಿಗೆ ತಕ್ಕಂತೆ ಸಾಹಸ ಸನ್ನಿವೇಶಗಳನ್ನೂ ಚಿತ್ರದಲ್ಲಿ ಅವರು ಅಳವಡಿಸಿದ್ದಾರಂತೆ. ಗಡ್ಡಪ್ಪ ಹಾಗೂ ಸಾಧು ಕೋಕಿಲ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರಂತೆ.



■ ರಘು